ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1524**
ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	19-03-2020
ಉತ್ತರಿಸುವ ಸಚಿವರು	:	ಮುಖ್ಯಮಂತ್ರಿಗಳು

***

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಯಾವ ಯಾವ ಮೂಲದಿಂದ ಎಷ್ಟು ಪ್ರಮಾಣದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲಾಗುತ್ತಿದೆ; (ಪ್ರತ್ಯೇಕವಾಗಿ ಪೂರ್ಣ ವಿವರ ನೀಡುವುದು)</td><td>ರಾಜ್ಯದಲ್ಲಿ ವಿವಿಧ ಮೂಲಗಳಿಂದ 2019-20ನೇ ಸಾಲಿನಲ್ಲಿ ಜನವರಿ-2020ರ ಅಂತ್ಯದವರೆಗೆ ಒಟ್ಟು 60,441.876 ದಶಲಕ್ಷ ಯೂನಿಟ್ ಗಳಷ್ಟು ವಿದ್ಯುತ್ ಲಭ್ಯವಾಗಿದ್ದು, ವಿವರಗಳು ಕೆಳಕಂಡಂತಿವೆ:
<table>
<tr><th>ಕ್ರ. ಸಂ</th><th>ವಿದ್ಯುತ್ ಉತ್ಪಾದನಾ ಮೂಲ</th><th>ಲಭ್ಯವಾಗಿರುವ ವಿದ್ಯುತ್ತಿನ ಪ್ರಮಾಣ (ದಶಲಕ್ಷ ಯೂನಿಟ್ ಗಳಲ್ಲಿ)</th></tr>
<tr><td>1</td><td>ಜಲವಿದ್ಯುತ್</td><td>10,931.906</td></tr>
<tr><td>2</td><td>ಶಾಖೋತ್ಪನ್ನ</td><td>9,249.092</td></tr>
<tr><td>3</td><td>ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು</td><td>15,684.668</td></tr>
<tr><td>4</td><td>ಬೃಹತ್ ಸ್ವತಂತ್ರ ವಿದ್ಯುತ್ ಉತ್ಪಾದಕರು</td><td>2,271.707</td></tr>
<tr><td>5</td><td>ಅಸಂಪ್ರದಾಯಕ ಮೂಲಗಳು ಹಾಗೂ ಇತರೆ</td><td>20,376.463</td></tr>
<tr><td>6</td><td>ದಾಮೋದರ್ ವ್ಯಾಲಿ ಕಾರ್ಪೋರೇಷನ್ (ಹೊರ ರಾಜ್ಯದಿಂದ ದೀರ್ಘಕಾಲಿಕ ಒಪ್ಪಂದ)</td><td>1,928.04</td></tr>
<tr><td></td><td>ಒಟ್ಟು</td><td>60441.876</td></tr>
</table></td></tr>
<tr><td>ಆ)</td><td>ರಾಜ್ಯಕ್ಕೆ ಅಗತ್ಯವಿರುವ ವಿದ್ಯುತ್ ಪ್ರಮಾಣವೆಷ್ಟು;</td><td>ಪ್ರಸ್ತುತ ರಾಜ್ಯದಲ್ಲಿ ದಿನವಹಿ 255 ರಿಂದ 261 ದಶಲಕ್ಷ ಯೂನಿಟ್ ಗಳಷ್ಟು ನಿರ್ಬಂಧಿತ ವಿದ್ಯುತ್ ಬೇಡಿಕೆಯಿದ್ದು, ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದ್ದು, ಯಾವುದೇ ಕೊರತೆಯಿರುವುದಿಲ್ಲ.</td></tr>
<tr><td>ಇ)</td><td>ಹೊಸದಾಗಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಸರ್ಕಾರ ಕೈಗೊಂಡಿರುವ ಯೋಜನೆಗಳೇನು;</td><td>ಹೊಸದಾಗಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಕವಿನಿನಿಯು ಈ ಕೆಳಗಿನ ಯೋಜನೆಗಳನ್ನು ಕೈಗೊಂಡಿರುತ್ತದೆ.
1. ರಾಮನಗರ ಜಿಲ್ಲೆಯ ಬಿಡದಿಯಲ್ಲಿ 1 x 11.5 ಮೆ.ವ್ಯಾ. ಸಾಮರ್ಥ್ಯದ ವೇಸ್ಟ್ ಟು ಎನರ್ಜಿ ವಿದ್ಯುತ್ ಕೇಂದ್ರ
2. ಛತ್ತೀಸ್‌ಗಡ್ ರಾಜ್ಯದ ಗೋದ್ನಾದಲಿ 2 x 800 (1600) ಮೆ.ವ್ಯಾ. ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಕೇಂದ್ರ.
3. 8 x 250 ಮೆ.ವ್ಯಾ. ಸಾಮರ್ಥ್ಯದ ಶರಾವತಿ ಪಂಪ್ಡ್ ಸ್ಟೋರೇಜ್ ಸ್ಕೀಮ್ ವಿಸ್ತೃತ ಯೋಜನಾ ವರದಿ ತಯಾರಿಕೆಯ ಹಂತದಲ್ಲಿದೆ</td></tr>
</table>

ಈ)	ಸದರಿ ಯೋಜನೆಯ ಅಂದಾಜು ಮೊತ್ತವೆಷ್ಟು; (ಪೂರ್ಣ ವಿವರ ನೀಡುವುದು)	1. ರಾಮನಗರ ಜಿಲ್ಲೆಯ ಬಿಡದಿಯಲ್ಲಿ 1 x 11.5 ಮೆ.ವ್ಯಾ. ಸಾಮರ್ಥ್ಯದ ವೇಸ್ಟ್ ಟು ಎನರ್ಜಿ ವಿದ್ಯುತ್ ಕೇಂದ್ರದ ಅಂದಾಜು ವೆಚ್ಚ 210.00 ಕೋಟಿ ರೂಪಾಯಿಗಳು. 2. ಛತ್ತೀಸ್‌ಗಢ್ ರಾಜ್ಯದ ಗೋದ್ನಾದಲಿ 2 x 800 (1600) ಮೆ.ವ್ಯಾ. ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಅಂದಾಜು ವೆಚ್ಚ 11333.00 ಕೋಟಿ ರೂಪಾಯಿಗಳು. 3. 8 x 250 ಮೆ.ವ್ಯಾ. ಸಾಮರ್ಥ್ಯದ ಶರಾವತಿ ಪಂಪ್ಡ್ ಸ್ಟೋರೆಜ್ ಸ್ಕೀಮ್ – ಅಂದಾಜು ವೆಚ್ಚ 5391.00 ಕೋಟಿ ರೂಪಾಯಿಗಳು.
ಉ)	ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುಚ್ಛಕ್ತಿ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆಯೇ; ಇದಕ್ಕೆ ಅನುಸರಿಸುತ್ತಿರುವ ಮಾನದಂಡಗಳೇನು;	ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸರಕಾರದ ಆದೇಶ ದನ್ವಯ ದಿನಾಂಕ:01–08–2008 ರಿಂದ ಜಾರಿಗೆ ಬರುವಂತೆ ರೈತರ 10 ಹೆಚ್.ಪಿ ಸೇರಿದಂತೆ 10 ಹೆಚ್.ಪಿ ವರೆಗಿನ ನೀರಾವರಿ ಪಂಪ್ ಸೆಟ್ ಸ್ಥಾವರಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಕೆ.ಇ.ಆರ್.ಸಿ. ಯು ನಿರ್ಧರಿಸಿರುವ ದರದಂತೆ ಸರ್ಕಾರದಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಉಚಿತ ವಿದ್ಯುತ್ ಪೂರೈಕೆಗಾಗಿ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದೆ. ನೀರಾವರಿ ಪಂಪ್ ಸೆಟ್ ಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಪಡೆದಕೊಳ್ಳಲು ಅನುಸರಿಸಬೇಕಾದ ಮಾನದಂಡಗಳು ಕೆಳಕಂಡಂತಿವೆ: 1. ಒಂದು ವರ್ಷದ ಅವಧಿಯೊಳಗೆ ಮೀಟರ್ ಗಳನ್ನು ಅಳವಡಿಸತಕ್ಕದ್ದು. 2. ಎಲ್ಲ ನೀರಾವರಿ ಪಂಪ್ ಸೆಟ್ ಗಳು ಅಂತರ್ಜಲ ರೆಗ್ಯೂಲೇಷನ್ ಗಳಲ್ಲಿ (ಕರ್ನಾಟಕ ಅಂತರ್ಜಲ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ ಅಧಿನಿಯಮ 1999 ವಿಧಿಸಲಾಗಿರುವ ಅಂತರವನ್ನು ಇನ್ನು ಮುಂದೆ ಕಡ್ಡಾಯವಾಗಿ ಪಾಲಿಸುವುದು. 3. ಯಾವುದೇ ನೀರಾವರಿ ಪಂಪ್ ಸೆಟ್ ಗಳನ್ನು ಸಂಬಂಧಪಟ್ಟ ಪ್ರಾಧಿಕಾರದ ಅನುಮೋದನೆ ಇಲ್ಲದೆ ಅಳವಡಿಸುವಂತಿಲ್ಲ. ಒಂದು ವೇಳೆ ಹಾಗೆ ಮಾಡಿದಲ್ಲಿ ಅವರಿಗೆ ಉಚಿತ ವಿದ್ಯುತ್ ನ್ನು ನೀಡಲಾಗುವುದಿಲ್ಲ. 4. ಮೀಟರ್ ಅಳವಡಿಕೆಯನ್ನು ತಡೆಯುವ ಯಾವುದೇ ರೈತ ಉಚಿತ ವಿದ್ಯುತ್ ನ್ನು ಪಡೆಯಲು ಅರ್ಹನಾಗಿರುವುದಿಲ್ಲ. 5. ಆದಾಯ ತೆರಿಗೆ/ವೃತ್ತಿ ತೆರಿಗೆ ಪಾವತಿಸುವ ವ್ಯಾಪ್ತಿಯಲ್ಲಿ ಬರುವ ಗ್ರಾಹಕರಿಗೆ ಉಚಿತ ವಿದ್ಯುತ್ ಸೌಲಭ್ಯ ಅನ್ವಯವಾಗುವುದಿಲ್ಲ. 6. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ರಾಜ್ಯದ ಅಥವಾ ಕೇಂದ್ರದ ಮಂಡಳಿಗಳು, ನಿಗಮಗಳು ಅಥವಾ ವಿಶ್ವವಿದ್ಯಾನಿಲಯಗಳು ಮತ್ತು ಅನುದಾನಿತ ವಿದ್ಯಾಸಂಸ್ಥೆಗಳು – ಇವುಗಳಿಂದ ವೇತನ ಪಡೆಯುವ ವ್ಯಕ್ತಿಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಅನ್ವಯವಾಗುವುದಿಲ್ಲ.
ಊ)	ರೈತರ ಪಂಪ್‌ಸೆಟ್‌ಗಳಿಗೆ ಯಾವ ಪ್ರಮಾಣದ ವಿದ್ಯುತ್‌ನ್ನು ಪ್ರತಿನಿತ್ಯ ಎಷ್ಟು ಸಮಯದವರೆಗೆ ನೀಡಲಾಗುತ್ತಿದೆ?	ರಾಜ್ಯ ಸರ್ಕಾರದ ಆದೇಶದನ್ವಯ, ರಾಜ್ಯದಲ್ಲಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನ ವೇಳೆ 4 ಗಂಟೆಗಳ ಕಾಲ ಮತ್ತು ರಾತ್ರಿಯ ವೇಳೆಯಲ್ಲಿ 3 ಗಂಟೆಗಳ ಕಾಲ, ಒಟ್ಟು ದಿನವಹಿ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ಸರಬರಾಜು ಮಾಡಲಾಗುತ್ತಿದೆ. ತಾಂತ್ರಿಕ ಸಾಧ್ಯತೆ ಇರುವ ಕಡೆ ಹಗಲಿನ ವೇಳೆಯಲ್ಲಿಯೇ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ಕೃಷಿ ಪಂಪ್‌ಸೆಟ್‌ಗಳಿಗೆ ಸರಬರಾಜು ಮಾಡಲಾಗುತ್ತಿದೆ.

ಸಂಖ್ಯೆ: ಎನರ್ಜಿ 70 ಇಬಿಎಸ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ